# ಅಧ್ಯಾಯ 7

ಶ್ರೀ ಗಣೇಶಾಯ ನಮಃ     ಸದ್ಗುರು ಸಿದ್ಧಾರೂಢ ನಮಃ




ಛಂದ :- ಸಿದ್ದನಾಥನ ಲೀಲೆ ಬಹುವಿಧ ವರ್ಣಿಸುವ ಪುಣ್ಯಾತ್ಮನು  ಶುದ್ಧಚಿತ್ತವ ಪಡೆದು
ಹೃದಯದಿ ಸದ್ಗುರುವ ಧ್ಯಾನಿಸವನು ಇದ್ದಸ್ಥಾನಕ್ಕೆ ಬಂದು ಗುರುವರನವರ ದೃಷ್ಟಿಗೆ
ಕಾನ್ಬಾನು ಬದ್ಧರನ್ನಿಪರಿಯವನು, ಜ್ಞಾನವನು ಯಿತ್ತುದ್ದರಿಪನು..

ಶ್ರೀ ಸಿದ್ಧಾರೂಢ ಸದ್ಗುರುನಾಥನೇ ನಿನ್ನ ದಿವ್ಯವಾದ ಚರಣಕಮಲಗಳಲ್ಲಿ ಮಸ್ತಕವನ್ನಿಟ್ಟು, ಪ್ರಾರ್ಥಿಸುವದೇನೆಂದರೆ - ನಿನ್ನ ಅವತಾರ ಕಥೆಯನ್ನು ನೀನೇ ವರ್ಣಿಸುವವನಾಗು, ಹೃದಯದಲ್ಲಿ ನಿನ್ನ ಚರಣಗಳನ್ನು ಚಿಂತಿಸಿದಾಗಲೇ, ದಯಾಘನನಾದ ನೀನು ಸ್ಫೂರ್ತಿಯನ್ನು ಕೊಡುವಿ. ನನ್ನ ಅಂತರದಲ್ಲಿ ನೀನು ಸದಾ ವಾಸಮಾಡಿ ಈ ಗ್ರಂಥವನ್ನು ಪೂರ್ಣ ಮಾಡುವವನಾಗು. ಸಿದ್ಧಯೋಗಿಯೇ, ನೀನು ಅವತಾರವನ್ನು ತೊಟ್ಟು ಜಗತ್ತಿನಲ್ಲಿ ನಾನಾ ಲೀಲೆಗಳನ್ನು ತೋರಿಸುವಿ; ಮುಮುಕ್ಷುಗಳಿಗೆ ಉಪದೇಶಿಸುವಿ, ಮತ್ತು ಭಕ್ತರಿಗೆ ಶೀಘ್ರವಾಗಿ ಸಂಸಾರದೊಳಗಿಂದ ತಾರಿಸುವಿ.

ಹಿಂದಿನ ಅಧ್ಯಾಯದಲ್ಲಿ ನಿರೂಪಿಸಿದ್ದೇನೆಂದರೆ -

ಸಿದ್ಧಾರೂಢರು ಉಡುಪಿ ಕ್ಷೇತ್ರದಲ್ಲಿ ಕೃಷ್ಣನಾಥನ ದರ್ಶನ ತಕ್ಕೊಂಡು,ನಿರ್ವಿಕಲ್ಪ ಸಮಾಧಿ ಸ್ಥಿತಿಯನ್ನು ಭೋಗಿಸಿ, ಕೂಡಲೇ ಉತ್ಥಾನವಾಗಿ ದೇಹವು ಭೋಗದಾಯಕ ಕರ್ಮಕ್ಕೆ ಅಧೀನವಾದದ್ದೆಂದು ತಿಳಿದು ಮುಂದಕ್ಕೆ ನಡೆದರೂ. ಧರ್ಮಸ್ಥಳ ಕ್ಷೇತ್ರವನ್ನು ಕಂಡು, ಮುಂದೆ ಗೋಕರ್ಣಕ್ಕೆ ಬಂದು

ಕೋಟಿ ತೀರ್ಥವನ್ನು ಪಾದಗಳಿಂದ ಸ್ಪರ್ಶಿಸಿ, ಮಹಾಬಲೇಶ್ವರನನ್ನು ನೋಡಿದರು. ಮನಸ್ಸಿನಲ್ಲಿ ಹೀಗೆ ಚಿಂತಿಸುತ್ತಾರಲ್ಲ, ಗೋ ಎಂಬ ಇಂದ್ರಿಯಗಣದೊಳಗೆ ಶ್ರೇಷ್ಠವಾದ ಕರ್ಣವು ಮಹಾವಾಕ್ಯ ಶ್ರವಣದಿಂದ ಮುಮುಕ್ಷು ಜನರಿಗೆ ತಾರಿಸುವದಾದ್ದರಿಂದ ಈ ಕ್ಷೇತ್ರಕ್ಕೆ ಗೋಕರ್ಣವೆಂಬ ಹೆಸರು ಬಂತು. ಹೀಗೆ ಚಿಂತಿಸುತ್ತಾ ಸಿದ್ಧನಾಥರು ಹೊರಗೆ ಬರುವಾಗ್ಗೆ ಒಬ್ಬ ಜಟಾಧಾರಿ ಸಾಧುವನ್ನು ನೋಡಿ, ಅವನ ಕೈಹಿಡಿದು, ಇಬ್ಬರೂ ಸಮುದ್ರದ ಕಡೆಗೆ ಹೋದರು. ಆಗ ಜಟಾಧಾರಿಯು, "ಈ ಶೀತವು ನನ್ನಿಂದ ಸಹಿಸೋಣವಾಗುವದಿಲ್ಲ' ಎಂದು ಅಂದನು. ಆಗ ಸಿದ್ಧರು ಅಲ್ಲಿ ಬಿದ್ದ ಒಂದು ಚಾಪೆಯನ್ನು ತೆಗೆದುಕೊಂಡು ಆ ಜಟಾಧಾರಿಯ ಕೊರಳೊಳಗೆ ಸಿಗಿಸಿ, "ಇದೊಂದು ನಿನಗೆ ಶಾಲು ಆಯಿತು" ಎಂದರು. ಆಮೇಲೆ ಸಮುದ್ರ ದಂಡೆಯ ಮೇಲೆ ಬಿದ್ದಿದ್ದ ಚಿಪ್ಪುಗಳನ್ನು ಕೂಡಿಸಿ, ಅದರದೊಂದು ಮಾಲೆ ಮಾಡಿ ಆ ಜಟಾಧಾರಿಯ ಕೊರಳಿಗೆ ಹಾಕಿ, ಅಂಗಡಿಯಲ್ಲಿ ಬೇಡಿಕೊಂಡು ಕುಂಕುಮ ತಂದು ಅವನ ಮುಖಕ್ಕೆ ತುಂಬ ಹಚ್ಚಿದರು. ಒಂದು

ಒಡಕು ಗಡಿಗೆ ಅವನ ಒಂದು ಕೈಯಲ್ಲಿ ಕೊಟ್ಟು, ಎರಡನೇ ಕೈಯಲ್ಲಿ ಒಂದು ಕಸಬರಿಕೆ ಕೊಟ್ಟು, "ಇದೋ ಈಗ ಭೈರವ ವೇಷ ತಯಾರಾಯಿತು. ಒಂದು ತಪ್ಪಡೆಯಷ್ಟೇ ಬೇಕಾಗಿರುವುದು", ಅಂದರು. ಅಷ್ಟರಲ್ಲಿ ಒಬ್ಬ ತಪ್ಪಡೆಗಾರನು ಆ ದಾರಿ ಅಲ್ಲಿ ಹೋಗುತ್ತಿರುವದನ್ನು ಕಂಡು, ಸಿದ್ಧಾರೂಢರು ಅವನನ್ನು ಕರೆದು ತಪ್ಪಡಿ ಬಾರಿಸಲಿಕ್ಕೆ ಹೇಳಿದರು. ಹೀಗೆ ಮೂರು ಮಂದಿ ವಾದ್ಯಘೋಷದಿಂದ ನಡೆಯುತ್ತ, ಅಂಗಡಿಗಳ ಮುಂದೆ ಆಟವಾಡುತ್ತಾ ಬಹಳ ರೊಕ್ಕವನ್ನು ಮಾಡಿದರು. ಆಮೇಲೆ ದೇವಸ್ಥಾನಕ್ಕೆ ಬಂದು ಮೂವರೂ ಶಿವಾಲಯದಲ್ಲಿ ಪ್ರವೇಶಿಸಿದರು. ಅಲ್ಲಿ ಒಬ್ಬ ಸಂತನು ಅನೇಕ ಜನ ಶ್ರೋತೃಗಳನ್ನು ಕೂಡ್ರಿಸಿಕೊಂಡು ಜ್ಞಾನೇಶ್ವರಿಯನ್ನು ಓದುತ್ತಿದ್ದನು. ಅವರ ಕಡೆಗೆ ಹೋಗಿ ಸಿದ್ದನು; "ಎಲೈ ಸಂತನೇ ಕೇಳು, ನೀನು ನಿತ್ಯದಲ್ಲಿಯೂ ಪುರಾಣ ಹೇಳುವಿ. ಇವತ್ತು ಒಂದು ದಿನ ನಾನು ಹೇಳುವೆನು, ಶ್ರೋತೃ ಜನರು ಕೇಳಲಿ. ಈ "ಊರ್ಧ್ವಮೂಲ" ಎಂಬ ಶ್ಲೋಕದ ಅರ್ಥವನ್ನು ಹೇಳಿ ಸರ್ವರಿಗೂ ಸಮಾಧಾನ ಮಾಡುವೆನು", ಎಂದು ಹೇಳಲು,

ಸಿದ್ಧಗುರುಗಳ ಮುಖತೇಜವನ್ನು ಕಂಡು "ಹಾಗೆಯೇ ಆಗಲಿ"ಎಂದು ನನ್ನ ಸ್ಥಾನವನ್ನುಸಿದ್ಧರಿಗೆ ಬಿಟ್ಟು ಕೊಟ್ಟು, ಸಂತನು ತಾನು ಶ್ರೋತಾ ಜನರೊಳಗೆ ಹೋಗಿ ಕೂತನು, ಸಿದ್ಧ ಸದ್ಗುರುಗಳ ಬಹು ಪೂರ್ವಪಕ್ಷವನ್ನು ತಕ್ಕೊಂಡು ಸಿದ್ಧಾಂತ ಸ್ವಪಕ್ಷ ವನ್ನು ಸ್ಥಾಪಿಸಿ, ವೈರಾಗ್ಯಪರ ಅರ್ಥವನ್ನು ಬೋಧಿಸಿದರು. ಇದು ಸರ್ವ ಬ್ರಾಹ್ಮಣರಿಗೂ ಮಾನ್ಯವಾಯಿತು. ಪುರಾಣ ಮುಗಿದು ಮಂಗಳಾರತಿ ಆಗುವಾಗ್ಗೆ ಎಲ್ಲರೂ ಆರತಿಯ ತಾಟಿನಲ್ಲಿ ರೊಕ್ಕ ಹಾಕುತ್ತಿದ್ದರು. ಆ ದಿವಸ ನಿತ್ಯಕ್ಕಿಂತ ಚತುರ್ಗುಣ ದ್ರವ್ಯ ಪ್ರಾಪ್ತವಾಗಲು, ಸಂತನಿಗೆ ಬಹು ಹರ್ಷವಾಯಿತು. ಆದರೆ ಆ ಹಣವನ್ನೆಲ್ಲ ಜಟಾಧಾರಿಯು ತಕ್ಕೊಂಡು ತನ್ನ ಜೋಳಿಗೆಯೊಳಗೆ ಹಾಕಿಕೊಳ್ಳುವದು ನೋಡಿ, ಸಂತನು ಬಹಳಸಿಟ್ಟಿಗೆದ್ದು ಹಣವನ್ನು ಎಳಕೊಳ್ಳಬೇಕೆಂದು ಹೋಗಲು, ಆತನನ್ನು ಕುರಿತು, ಎಲ್ಲರೂ ಅನ್ನುತ್ತಾರೆ, "ಅವರು ಈದಿನ ಪುರಾಣವನ್ನು ಹೇಳಿರುತ್ತಾರೆ. ಹಣದ ಅರ್ಧ ಭಾಗವನ್ನಾದರೂ ಅವರಿಗೆ ಬಿಡು," ಎಂದು ಹೇಳಲು ಪುರಾಣಿಕನು ಈ

ವಚನವನ್ನು ಮನ್ನಿಸಿದನು. ಆಗ ಸಿದ್ದನಾಥರು, "ಹೇ ಸಂತನೇ, ನೀನು ದ್ರವ್ಯದೆಶಯಿಂದ ಪುರಾಣ ಹೇಳುತ್ತಿದ್ದಿಯಾದರೆ, ಇಗೋ ಹಿಡಿ" ಎಂದು ತನ್ನ ಜೋಳಿಗೆಯೊಳಗಿಂದ ಏಳು ಮೊಹರುಗಳನ್ನು ತೆಗೆದು, ಆ ಪ್ರಯಾಣಿಕನಿಗೆ ಕೊಡಲು ಆತನು ಬಹು ಅನುತಾಪಯುಕ್ತನಾಗಿ ದೈನ್ಯಭಾವದಿಂದ ಸಿದ್ಧರ ಪಾದಕ್ಕೆ ಬಿದ್ದನು. ಅಲ್ಲಿದ್ದವರೆಲ್ಲರೂ, "ಈತನು ಯಾರೋ ಮಹಾಪುರುಷನಿರುವನು; ಈತನ ದರ್ಶನದಿಂದ ಮಹಾಪಾತಕಗಳು ನಾಶವಾಗುವವು. ಈತನ ಭಕ್ತರು ಧನ್ಯರು", ಎಂದನ್ನುತ್ತಿದ್ದರು. ಆ ಮೇಲೆ ಆ ಜಟಾಧಾರಿ ಸಮೇತವಾಗಿ ಸಿದ್ಧನಾಥರು, ನರ್ತನ ಮಾಡುತ್ತ ಮುಂದೆ ಹೋಗುತ್ತಿರುವಾಗ, ಒಬ್ಬ ಬ್ರಾಹ್ಮಣನು ನೈವೇದ್ಯ ಪದಾರ್ಥಗಳನ್ನು ತಕ್ಕೊಂಡು ದೇವಾಲಯಕ್ಕೆ ಹೋಗುತ್ತಿದ್ದರು. ಅವನನ್ನು ನೋಡಿ,ಸಿದ್ಧರು, "ಎಲೋ ಬ್ರಾಹ್ಮಣನೇ, ಈ ಪದಾರ್ಥಗಳನ್ನು ಎಲ್ಲಿಗೆ ವೈಯ್ಯುವಿ", ಎಂದು ಕೇಳಲು, "ಶ್ರೀ ಮಹಾಬಲೇಶ್ವರನಿಗೆ ಅರ್ಪಿಸುವದಕ್ಕೆಂದು" ಆತನು ಉತ್ತರ ಕೊಡಲು ಸಿದ್ಧರು, "ಇಗೋ ನಾನೇ ಮಹಾಬಲೇಶ್ವರನಿದ್ದೇನೆ.

ಇಲ್ಲವೋ, ಎಂದು ಮೊದಲು ಸಿದ್ಧಮಾಡಿಕೊಂಡು , ಆಮೇಲೆ ಶಿಲಾಮೂರ್ತಿಗೆ ನೈವೇದ್ಯ ತೋರಿಸು", ಎಂದು ಅನ್ನಲು, ಆ ಬ್ರಾಹ್ಮಣನು,"ನೀನು ಆಶಾಬದ್ಧ ಪ್ರಾಣಿ ಇರುವಿ. ನಿನಗೆ ಯಾರು ದೇವರನ್ನಬೇಕು!" ಎಂದು ನೋಡಿದನು. ಕೂಡಲೇ ಜಟಾಧಾರಿಯು ಅವನ ಕೈಯಿಂದ ನೈವೇದ್ಯವನ್ನು ಹರಣಮಾಡಲಿಕ್ಕೆ ಹೋಗಲು, ಆ ಬ್ರಾಹ್ಮಣನು ಶಂಖಧ್ವನಿ ಮಾಡಿದನು. ಆ ಘೋಷವನ್ನು ಕೇಳಿ, ಬಹುಜನ ಓಡಿಬಂದು ಆ ಜಟಾಧಾರಿಯನ್ನು ಹಿಡಿದು ಹೊಡಿಲಿಯಲಿಕ್ಕೆ ಉದ್ಯುಕ್ತರಾದರು. ಸಿದ್ಧನಾಥನು ಅವರಿಗೆ ಅಂದದ್ದೇನೆಂದರೆ- "ನೀವು ಏನೊಂದೂ ವಿಚಾರವನ್ನು ಮಾಡಿದೆ, ಆ ಜಟಾಧಾರಿಗೆ ಹೊಡೆಯುವಿರಿ. ಆದರೆ ಮಹಾಬಲೇಶ್ವರನುಸರ್ವವ್ಯಾಪಕನಿರುತ್ತಾನೆ, ಈತನಲ್ಲಿ ಇಲ್ಲವೆ ? ಆಥನು ಶಿಲಾಮುಖದಿಂದ ತೃಪ್ತನಾಗದೆ ಸಾಧು ಮುಖದಿಂದ ಪೂರ್ಣ ತುಷ್ಟನಾಗುವನು. ಹಸಿದ ಪ್ರಾಣಿಯ ಮುಖದಲ್ಲಿ ಅನ್ನ ಹಾಕುವುದರಿಂದ ಆ ಪರಮಾತ್ಮನು ಸಂತುಷ್ಟನಾಗುವನು. ಇದಕ್ಕೆ ಗೀತಾ ಪ್ರಮಾಣವು ಹೀಗಿದೆ,

“ಅಹಂ ವೈಶ್ವಾನರೋಭೂತ್ವಾ ಪ್ರಾಣಿನಾಂ ದೇಹಮಾಶ್ರಿತಾಃ” ಅಂದರೆ ಭಗವಂತನು ತಾನು ವೈಶ್ವಾನರ ರೂಪದಿಂದ ಸರ್ವ ಪ್ರಾಣಿಗಳ ದೇಹದಲ್ಲಿರುವವನು . ಇದನ್ನು ಕೇಳಿ ಆ ಬ್ರಾಹ್ಮಣರಲ್ಲರೂ ಸಮಾಧಾನ ಹೊಂದಿದರು. ಅವರೆಲ್ಲರೂ ಕೂಡಿ ಆ ನೈವೇದ್ಯ ಪದಾರ್ಥಗಳನ್ನು ಜಟಾಧಾರಿ ಸಾಧುವಿಗೆ ಅರ್ಪಿಸಿ, 'ನಾವೆಲ್ಲರೂ ಅಜ್ಞಾನಿಗಳಿದ್ದೇವೆ, ನಿಮ್ಮಿಂದ ನಮ್ಮ ಉದ್ಧೃತಿಯಾಗಬೇಕು', ಅಂದು ಹೊರಟು ಹೋದರು. ಅನಂತರ ಆ ಮೂರೂ ಮಂದಿ ಆ ಫಲಾದಿ ವಸ್ತುಗಳನ್ನು ಸೇವಿಸಿದರು. ಸಿದ್ಧನಾಥರು, ಕೂಡಿದ ಹಣವನ್ನೆಲ್ಲಾ ಆ ತಪ್ಪಡೆಗಾರನಿಗೆ ಕೊಟ್ಟು ಅವನನ್ನು ಕಳುಹಿಸಿದರು. ಆ ಮೇಲೆ ಆ ಇಬ್ಬರೂ ಯತಿವರರು ನಾಗತೀರ್ಥಕ್ಕೆ ಹೋಗಿ ಸ್ನಾನಮಾಡಿ, ಆ ಸ್ಥಾನದಲ್ಲಿ ನಾಲ್ಕು ದಿವಸ ವಾಸ ಮಾಡಿದರು. ಆ ಸ್ಥಾನಕ್ಕೆ ನಿತ್ಯ ಸಾಯಂಕಾಲಕ್ಕೆ ಬ್ರಾಹ್ಮಣರು ಬಂದು, ಸಿದ್ಧರ ಕೂಡ ವೇದಾಂತ ವಿಚಾರವನ್ನು ಮಾಡಿ, ಅವರ ಉತ್ತರಗಳಿಂದ ತಮ್ಮ ಶಂಕೆಗಳನ್ನು ನಿವಾರಿಸಿಕೊಳ್ಳುತ್ತಿದ್ದರು. ಅವರು ಬಹು ಆನಂದದಿಂದ ಸಿದ್ಧ

ಸದ್ಗುರುಗಳಿಗೆ ನಮಸ್ಕರಿಸಿ ಹೋಗುತ್ತಿದ್ದರು. ಅಲ್ಲಿಂದ ಸಿದ್ಧಾರೂಢರು ಚೆನ್ನಬಸವಣ್ಣನವರ ಸಮಾಧಿಸ್ಥಾನವಾದ ಉಳಿವಿಕ್ಷೇತ್ರವನ್ನು ಕಂಡು ಮುಂದೆ ಹುಬ್ಬಳ್ಳಿ ಶಹರ ದಾಟಿ; ಪಂಢರಪುರಕ್ಕೆ ತೆರಳಿದರು. ಮಧ್ಯವರ್ತಿಗಳಾದ ಕಲ್ಯಾಣ ಮುಂತಾದ ಪುರಗಳನ್ನು ನೋಡಿ, ಪಂಢರಪುರಕ್ಕೆ ಹೋಗಿ, ಶ್ರೀ ವಿಠಲನ ದರ್ಶನ ತಕ್ಕೊಂಡು, ಮುಂದೆ ನಾಸಿಕ ಕ್ಷೇತ್ರಕ್ಕೆ ಹೋದರು. ನಾಸಿಕ, ಗೋದಾವರಿ ತೀರ್ಥ,ಪಂಚವಟಿ ಮುಂತಾದ ಸ್ಥಾನಗಳನ್ನು ನೋಡುತ್ತ, ಗುಪ್ತಗುಹೆಯಲ್ಲಿ ಇಳಿದು ಕಾಲನಾರಾಯಣನನ್ನು ಕಂಡರು. ತ್ರ್ಯಂಬಕೇಶ್ವರನ ದರ್ಶನ ತಕ್ಕೊಂಡು, ಠಾಕುರಜಿಯನ್ನು ನೋಡಿ, ಮುಂದೆ ದ್ವಾರಕೆಗೆ ಹೋಗಿ ಶ್ರೀ ಕೃಷ್ಣನಾಥನದರ್ಶನ ತೆಗೆದುಕೊಂಡು ದೇವಾಲಯದ ಹೊರಗೆ ಬರುತ್ತಿರಲು, ಅಲ್ಲಿ ಒಬ್ಬ ವೈಷ್ಣವರು ಭೇಟಿಯಾದನು. ಆತನು ಸಿದ್ಧರನ್ನು ಕುರಿತು, “ನೀವು ಮಾಯಾವಾದಿಗಳಂತ ಕಾಣಿಸುತ್ತೀರಿ”, ಅನ್ನಲು, ಅಹುದು ಎಂದು ಸಿದ್ಧರು ಉತ್ತರ ಕೊಟ್ಟರು. ಆಗ ಆತನು ಸದ್ಗುರುಗಳನ್ನು ಕುರಿತು, “ಹಾಗಾದರೆ ನೀವು ಜಗತ್ತು

ವ್ಯವಹಾರಿಕವೆನ್ನುತ್ತೀರೋ ಪ್ರಾತಿಭಾಸಿಕವೆನ್ನುವೀರೂ" ಎಂದು ಕೇಳಲು, ಸಿದ್ಧರು "ಇದು ಸ್ವಪ್ನವತ್ ಪ್ರಾತಿಭಾಸಿಕವಿದೆ", ಎಂದು ಉತ್ತರ ಕೊಟ್ಟರು. ಆಗ ಆ ಬ್ರಾಹ್ಮಣನು, "ಹಾಗಾದರೆ, ಸ್ವಪ್ನದ ಅಧಿಷ್ಠಾನವ್ಯಾವದೆಂತ ಹೇಳಿರಿ; ಅಧಿಷ್ಠಾನವು ಬ್ರಹ್ಮವೆಂದರೆ ಬ್ರಹ್ಮಜ್ಞಾನಿಗೆ ಸ್ವಪ್ನ ಕಾಣಬಾರದು, ಯಾಕೆಂದರೆ ಜ್ಞಾತ ಅಧಿಷ್ಠಾನವಿರುವಲ್ಲಿ ಅಧ್ಯಾಸವು ಅಸಂಭವವು, ಆತ್ಮಾಧಿಷ್ಠಾನವೆಂದರೆ, ತ್ವಂಪದ ಶೋಧನ ಮಾಡಿದ ಅಧಿಕಾರಿಗೆ ಆತ್ಮಜ್ಞಾನವಾಗಲು, ಆತನಿಗಾದರೂ ಸ್ವಪ್ನ ಕಾಣಬಾರದು " ಎಂದು ನುಡಿಯಲು, ಅವಧೂತರು, ಜಾಗ್ರದಾವಸ್ಥೆಯ ಅದಿಷ್ಠಾನ ಚೈತನ್ಯಕ್ಕೆ ಯಾವ ಆವರಣವಾಗುವದೋ ಅದರಿಂದಲೇ ಕಲ್ಪಿತ ಸ್ವಪ್ನ ಉಂಟಾಗುವದು. ಅಥವಾ ಕಾರಣ ಶರೀರಗತ ಚೈತನ್ಯ ಯಾವದುಂಟೋ ಅದಕ್ಕೆ ಸದೋಷಾವರ್ತಿಯಿಂದ ಸ್ವಪ್ನಾಧ್ಯಾಸವಾಗುವದು. ಆ ಚೈತನ್ಯಕ್ಕೆ ಅಹಂ ಇದಂ ಪ್ರತೀತಿಯಾಗುತ್ತಲೇ ಸ್ವಪ್ನವು, ಲಯವಾಗಿ ತನ್ನ ಕಾರಣದಲ್ಲಿ ಸೇರುವುದು. ಆದ್ದರಿಂದ ಕಾರಣ ಶರೀರಗತ ಚೈತನ್ಯವೂ

ಸ್ವಪ್ನಕ್ಕೆ ಅಧಿಷ್ಠಾನವಹುದು" ಎಂದು ಉತ್ತರ ಕೊಟ್ಟರು. ಸದ್ಗುರುಗಳ ಈ ಭಾಷಣವನ್ನು ಕೇಳಿ, ಬ್ರಾಹ್ಮಣನು ಆನಂದಪಟ್ಟು, ಮಹಾತ್ಮರನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಸುಖಭೋಜನವನ್ನು ಅರ್ಪಿಸಿದನು. ಸಿದ್ಧನಾಥರು ಅಲ್ಲಿಂದ ಮುಂದೆ ಉಜ್ಜಯನೀ ನಗರಕ್ಕೆ ಹೋಗಿ, ಮಹಾಕಾಳಿಯ ದರ್ಶನವನ್ನು ತೆಗೆದುಕೊಂಡು "ಮಹಾಕಾಳಿ ನನ್ನ ಏಕಾಂಶದ ಶಕ್ತಿ ಇರುವಳು", ಎಂದು ತಿಳಿದುಕೊಂಡರು. ಅಲ್ಲಿಂದ ಹೊರಟು ಓಂಕಾರೇಶ್ವರಕ್ಕೆ ಬಂದು, ಅಲ್ಲಿ ಯುಗಕ್ಕೊಮ್ಮೆ ಕೋಟಿ ಲಿಂಗಗಳು ಉದ್ಭವವಾಗುತ್ತವೆಂದು ಪ್ರಸಿದ್ಧಿಯಾದ ಸರೋವರವನ್ನು ನೋಡಿದರು. ಪಾಮರ ಜನರಿಗೆ ವಿಶ್ವಾಸ ಹುಟ್ಟುವದಕ್ಕಾಗಿ ಹೀಗೆ ಹೇಳುವರು. ಹ್ಯಾಗೆ ಪಕ್ಷಿ ತೀರ್ಥದಲ್ಲಿ ಪಕ್ಷಿಗಳು ನಿತ್ಯ ಸ್ನಾನಕ್ಕೆ ಬರುತ್ತವೆಯೆಂಬುದು ನೋಡುವವರಿಗೆ ಆಶ್ಚರ್ಯವಾಗಿ ವಿಶ್ವಾಸ ಹುಟ್ಟುವದೋ, ಹಾಗೆಯೇ ಈ ಸ್ಥಾನದಲ್ಲಿ ಲಿಂಗೋದ್ಭವವಾಗಿರುವದು. ಯಾವದೊಂದು ಚಮತ್ಕಾರವನ್ನು ನೋಡಿದ ವಿನಹಾ ಪುಣ್ಯಸ್ಥಾನವೆಂದು ಮೂಢ ಜನರು ತಿಳಿಯಲಾರರು. ಇದನ್ನು

ತಿಳಿದು ಮಹಾತ್ಮರು ಇಂಥಾ ಸ್ಥಾನಗಳನ್ನು ನಿರ್ಮಿಸಿರುವರು. ಇದರಿಂದ ಜನರೊಳಗೆ ಸಹಜವಾಗಿ ಆಸ್ತಿಕ್ಯಭಾವವು ಉತ್ಪನ್ನವಾಗುವದು. ಅನಂತರ ಭಕ್ತಿ ಉಂಟಾಗಿ, ಪರಂಪರೆಯಿಂದ ಮುಕ್ತಿ ಪ್ರಾಪ್ತವಾಗುವುದು. ಇರಲಿ, ಓಂಕಾರೇಶ್ವರನನ್ನು ಸ್ಪರ್ಶಿಸಿ, ತೀರ್ಥಸ್ನಾನ ಮಾಡುತ್ತಿರುವಾಗ, ಜನರು ಮತ್ಸ್ಯಗಳಿಗೆ ಆಹಾರವನ್ನು ಹಾಕುತ್ತಿದ್ದದ್ದು ನೋಡಿ ಸಿದ್ಧರು ಅಂದುಕೊಳ್ಳುತ್ತಾರಲ್ಲಿ, ಪ್ರಾಣಿಗಳಿಗೆ ಅಲ್ಲಿಂದಲ್ಲೆ ಭಗವಂತನು ಆಹಾರವನ್ನು ಪೂರೈಸುವನು. ಆದ್ದರಿಂದ ಅನ್ನಕ್ಕೋಸ್ಕರ ಪ್ರಯತ್ನ ಮಾಡುವುದು ವ್ಯರ್ಥವು." ಈ ಪ್ರಕಾರ ಚಿಂತಿಸುತ್ತಿರುವಾಗ, ಒಬ್ಬ ಭಕ್ತನು ಬಹು ಫಲಾಹಾರಸಾಮಗ್ರಿಗಳನ್ನು ತಕ್ಕೊಂಡು ಬಂದು, ಮಹಾತ್ಮರನ್ನು ನೋಡಿ, "ಇವರು ಬ್ರಹ್ಮಾನಂದ ಸಾಗರದಲ್ಲಿಯ ಮೀನಿನಂತಿರುವರು. ಈ ಪದಾರ್ಥಗಳನ್ನು ಇವರಿಗೆ ಅರ್ಪಿಸಬೇಕು" ಎಂದು ಅಂದುಕೊಂಡು, ಸಿದ್ಧರ ಸಮ್ಮುಖಕ್ಕೆ ಬಂದು ಆ ಫಲಹಾರಾದಿಗಳನ್ನು ಅವರ ಮುಂದಿಟ್ಟು ಸೇವಿಸಬೇಕೆಂದು ಪ್ರಾರ್ಥಿಸಿದನು. ಸಿದ್ಧರಾಯರು

ಅದನ್ನು ಸೇವಿಸಿ, ಆ ಸದ್ಭಕ್ತನನ್ನು ಆಶೀರ್ವದಿಸಿ ಕಳುಹಿಸಿಕೊಟ್ಟ, ತಾವು ಕೆಲವು ಹೊತ್ತು ವಿಶ್ರಮಿಸಿಕೊಂಡರು. ಅಲ್ಲಿಂದ ಮುಂದೆ ಮಥುರಾಪಟ್ಟಣಕ್ಕೆ ಪ್ರಮಾಣ ಮಾಡಿ, ದಿವ್ಯ ಮಂದಿರದಲ್ಲಿ ಶ್ರೀಕೃಷ್ಣಮೂರ್ತಿಯನ್ನು ಕಂಡು, ಗೋಕುಲ ವೃಂದಾವನ ರಾಸಕ್ರೀಡಾ ಸ್ಥಾನಾದಿಗಳನ್ನು ನೋಡಿದರು. ಮುಂದೆ ಕಾಶ್ಮೀರ ದೇಶಕ್ಕೆ ಹೋಗಿ, ಜ್ಯೋತಿಷ್ಯರನ್ನು ಕಂಡು, ಅವರ ಕೂಡ ಖಗೋಲ ವಿಚಾರ ಮಾಡುತ್ತಿರುವಾಗ, ಸಿದ್ಧ ಗುರುಗಳು ಕೇಳುತ್ತಾರಲ್ಲ "ಸುಮೂಹೂರ್ತವನ್ನು ಪ್ರಾಪ್ತ ಕಾಲದಲ್ಲಿ ಉಚ್ಚರಿಸಬೇಕೋ ಅಥವಾ ಅಪ್ರಾಪ್ತ ಕಾಲದಲ್ಲಿ ಉಚ್ಚರಿಸಬೇಕು. ಇದಕ್ಕೆ ಒಬ್ಬ ಜೋಯಿಸನು, "ಸುಮುಹೂರ್ತವನ್ನು ಈ ಪ್ರಕಾರ ಉಚ್ಚರಿಸಬೇಕು. ಪ್ರಥಮ ಪಾದ ಪಂಚಮ ಮುಹೂರ್ತದಲ್ಲಿ ಉಚ್ಚರಿಸಬೇಕು. ಪ್ರಥಮ ಪಾದದ ಪಂಚಮ ಮುಹೂರ್ತದಲ್ಲಿ ಉಚ್ಚರಿಸಿದರೆ, ಸರ್ವ ರೀತಿಯಿಂದ ಕಲ್ಯಾಣವಾಗುವದು," ಎಂದು ಉತ್ತರ ಕೊಟ್ಟಿದ್ದು ಕೇಳಿ ಸಿದ್ಧರು ಅದನ್ನು ಮನ್ನಿಸಿದರು.ಆ ಮೇಲೆ ಆ

ಜೋಯಿಸನು ಸಿದ್ಧರನ್ನು ಕುರಿತು, "ಯಾವ ನಿಮಿತ್ತ ಸೂರ್ಯನಿಗೆ ಅಂಶ ಗ್ರಹಣವಾಗುತ್ತದೆ ಎಂಬುದನ್ನು ನಮಗೆ ನಿರೂಪಿಸಿರಿ" ಎಂದೆನ್ನಲು, ಸಿದ್ಧಯೋಗಿಗಳು, "ಕೇಳ್ಳೈ ಜೋಯಿಸನೆ ಸೂರ್ಯನು ಯಾವ ರಾಶಿಯಲ್ಲಿ ಬರುವನೋ ಆ ರಾಶಿಯಲ್ಲಿ ನಕ್ಷತ್ರದ ಒಂಭತ್ತು ಪಾದಗಳಿರುವವು. ಅದರಲ್ಲಿ ಸೂರ್ಯ ಸಂಬಂಧಿ ಎಷ್ಟು ಪಾದಗಳಿರುವವೋ ಅಷ್ಟು ಅಂಶಕ್ಕೆ ಗ್ರಹಣವಾಗುವದು", ಅಂದರು. ಇದನ್ನು ಕೇಳಿ, ಜೋಯಿಸನು ಆನಂದಪಟ್ಟನು. ಸಿದ್ಧಾರೂಢರು ಕಾಶ್ಮೀರದಿಂದ ಪಂಜಾಬಕ್ಕೆ ಬಂದಾಗ ಅಲ್ಲಿ ಒಬ್ಬ ಚರಕಮುನಿಯ ಸಾಂಪ್ರದಾಯಕನನ್ನು ಕಂಡು, ಆತನನ್ನು ಕುರಿತು ಹೇಳುತ್ತಾರೆ, "ವೈದ್ಯನು ರೋಗಿಯನ್ನು ಪರೀಕ್ಷಿಸಿ, ಸಾಧ್ಯಾಸಾಧ್ಯ ವಿಚಾರವನ್ನು ಮಾಡಿ, ಆ ಮೇಲೆ ಗುಣಪರಿಗ್ರಹವನ್ನು ಶೋಧಿಸಬೇಕು. ರೋಗದ ಪ್ರಾಣಾದಿ ನಾಲ್ಕು ಭಾಗಗಳನ್ನು ಮಾಡಿ, ಈಶ್ವರ ಧ್ಯಾನದಿಂದ ಎರಡು ಭಾಗಗಳನ್ನು ಪರಿಹರಿಸಿ, ಬಾಕಿ ಎರಡು ಭಾಗಗಳನ್ನು ಔಷಧೋಪಚಾರದಿಂದ ನಿವೃತ್ತಿ ಮಾಡಬೇಕು". ಈ ವಚನವು ವೈದ್ಯನಿಗೆ ಮಾನ್ಯವಾಯಿತು. ಆ ಮೇಲೆ ಸಿದ್ಧರು

ಅಮೃತಸರಗೆ ಹೋಗಿ, ಇದು ಪುಷ್ಕರ ತೀರ್ಥಕ್ಕೆ ಸಮಾನವೆಂದು ಅಂದು, ಅಲ್ಲಿಂದ ನಾನಕ ಪೀಠಕ್ಕೆ ಹೊದರು. ಅಲ್ಲಿ ಗುರುಮುಖಿ ಶಾಸ್ತ್ರವನ್ನು ನೋಡಿ, ಅದರೊಳಗೂ ಓಂಕಾರ ಧ್ಯಾನವು ಪ್ರತಿಪಾದಿಸಿದೆ, ಎಂದು ತೋರಿಸಿ, ಜನರಿಗೆ ಪ್ರಣವೋಪಾಸನೆಯನ್ನು ಬೋಧಿಸಿದರು. ಅನಂತರ ಸಿದ್ಧಾರೂಢರು ಕುರುಕ್ಷೇತ್ರವನ್ನು ಕಂಡು, ಮುಂದೆ ಹರಿದ್ವಾರ, ಕ್ಷೇತ್ರಕ್ಕೆ ಹೋಗಿ, ಅಲ್ಲಿಂದ ಬದರಿಕಾಶ್ರಮವನ್ನು ಕುರಿತು ತೆರಳಿದರು.ನಾರಾಯಣಾಶ್ರಮವನ್ನು ನೋಡಿ, ಕೇದಾರೇಶ್ವರವನ್ನು ಕಂಡು, ಅಲ್ಲಿಂದ ಕಾಶಿಗೆ ಬಂದು ಜ್ಞಾನವಾಪಿಯ ಮೇಲೆ ವಿಶ್ರಾಂತಿ ಮಾಡಿಕೊಂಡರು. ಕ್ಷಣ ಮಾತ್ರ ನಿರ್ವಿಕಲ್ಪ ಸಮಾಧಿಸ್ಥರಾಗಿ, ಆಮೇಲೆ ಶರೀರವನ್ನು ಅಜಗರನಂತೆ ಭೂಮಿಗೆ ಹಾಕಿ ಮಲಗಿಕೊಂಡರು. ಆಗ ಶಿವಾನಂದನೆಂಬ ಸನ್ಯಾಸಿಯು ಭೂಮಿಯ ಮೇಲೆ ಬಿದ್ದಿರುವ ಸಿದ್ಧರನ್ನು ಕಂಡು, ಹೀಗೆ ಶವಾಸನವನ್ನು ಹಾಕಿ ಯೋಗಾಭ್ಯಾಸ ಮಾಡವವನಾಗಿರಬೇಕು. ಇಲ್ಲವೆ ಸಹಾಜಾವಸ್ಥೆಯೊಳಗೆ ಇರುವಂಥಾ ಬ್ರಹ್ಮನಿಷ್ಠನಿರಬಹುದು. ಇದರ ಪ್ರತೀತಿಯನ್ನು

ನೋಡುವ, ಎಂದು ಸಮೀಪ ಬಂದು ಸಿದ್ದರನ್ನು ಸ್ಪರ್ಶಿಸಿದನು. ಅವನ ಹಸ್ತ ಸ್ಪರ್ಶವಾದ ಕೂಡಲೇಸಿದ್ದರು ಕಣ್ಣು ತೆರೆದು ನೋಡಲು, ಶಿವಾನಂದನು, "ನಿಮ್ಮ ಈ ಆಸನವ್ಯಾವದು" ಎಂದು ಕೇಳಿದನು. ಅದಕ್ಕೆ ಸಿದ್ಧರಂದದ್ದು, "ತಾಯಿಯ ಹೊಟ್ಟೆಯೊಳಗಿಂದ ಬಂದ ಈ ಶರೀರವೇ ನಾನು ಎಂದು ಅಹಂಕಾರ ಹಿಡಿದು ಜೀವನು  ಇರುತ್ತಾನೆ. ಇಂಥವನಿಗೆ ಆಸನಗಳು ಹೇಳಲ್ಪಡುತ್ತವೆ. ಆದರೆ ಯಾವಾತನ ಬ್ರಹ್ಮಸ್ಥಿತಿಯು ಅಖಂಡವಾಗಿರುವದೋ  ಆತನಿಗೆ ಯಾವ ಆಸನವೂ ಇಲ್ಲ." ಅನಂತರ ಆ ಯತಿಯು ಸಿದ್ದರನ್ನು  ಕುರಿತು, "ಬಿಂಬ ಪ್ರತಿಬಿಂಬಗಳಲ್ಲಿ ಸಂಸರ್ಗಭೇದವಿರುವದೋ?ಸಂಸರ್ಗ ಅಭೇದವಿರುವದೋ ?" ಎಂದು ಪ್ರಶ್ನೆ ಮಾಡಲು, ಅವಧೂತರು ಅಂದದ್ದು, "ಭೇದಾಭೇದ ತಾದಾತ್ಮ್ಯ  ಅನಿರ್ವಚನೀಯವೇ ನಮ್ಮ ಸಿದ್ಧಾಂತವು. ಉಪಾಧಿ ಯೋಗದಿಂದ ಯಾವ ಭೇದ ತೋರುವದೋ  ಅದು ಅನುಭವದಿಂದ ಇರುವದಿಲ್ಲ" ಅದು ಹ್ಯಾಗಾಗುತ್ತದೆಂದು ಸನ್ಯಾಸಿಯು  ಕೇಳಲು ಸಿದ್ಧರು,

“ದರ್ಪಣದೊಳಗೆ ಮುಖ ನೋಡುವಾಗ್ಗೆ, ಗ್ರೀವಸ್ಥ ಪ್ರತಿಬಿಂಬವು ಕಾಣಿಸುವದು. ಮುಖಬಿಂಬ ಉತ್ತರಾಭಿಮುಖ ಇರುವಾಗ್ಗೆ ಪ್ರತಿಬಿಂಬ ದಕ್ಷಿಣಾಭಿಮುಖವಾಗಿ ತೋರುತ್ತದೆ. ಈ ಪ್ರಕಾರ ಅವೆರಡರಲ್ಲಿ ಭೇದ ಕಂಡರೂ ಅನುಭವದಿಂದ ಭೇದವಿಲ್ಲ. ಯಾಕೆಂದರೆ ದರ್ಪಣದೊಳಗೆ ಯಾವ ಮುಖ ಭಾಸಿಸುತ್ತದೋ, ಅದರಂತೆ ತನ್ನದೆಂದು ತಿಳಿಯುತ್ತಾನೆ. ಇದು ಭೇದವೋ ಅಭೇದವೋ ಎಂದು ನಿರ್ಧಾರ ಹೇಳಲಾಗುವುದಿಲ್ಲ ಎಂತ ಇದಕ್ಕೆ ಅನಿರ್ವಚನೀಯವೆಂದು ನಮ್ಮ ಸಿದ್ಧಾಂತವಿರುವದು”, ಎಂದನ್ನಲು, ಶಿವಾನಂದನು ಸಂತೋಷಪಟ್ಟು, ತಾನು ತಂದ ಮಾಧುಕರಿ ಅನ್ನವನ್ನು ತೆಗೆದು, ಇಬ್ಬರೂ ಬಹು ಆನಂದದಿಂದ ಅದನ್ನು ಭಕ್ಷಿಸಿದರು. ಆಮೇಲೆ ಸನ್ಯಾಸಿಯು ತನ್ನ ಆಶ್ರಮಕ್ಕೆ ತೆರಳಿದನು. ಅನಂತರ ಸಿದ್ಧಾರೂಢ ಯತೀಶ್ವರರು ದಂಡಪಾಣಿ ಲಿಂಗದರ್ಶನಕ್ಕೆ ಹೋಗುವಾಗ್ಗೆ, ಜ್ವರ ರೋಗಗ್ರಸ್ತನಾದ ಒಬ್ಬ ಬ್ರಾಹ್ಮಣನು ಎದುರಿಗೆ ಬಂದನು. ಮೂರು ವರ್ಷಗಳಿಂದ ಜ್ವರ ಪೀಡಿತನಾದ ಆ ಬ್ರಾಹ್ಮಣನು, ಅನುಗ್ರಹದಿಂದ ತನ್ನ ರೋಗ

ಪರಿಹಾರ ಮಾಡಬೇಕೆಂದು ಸಿದ್ಧಾರೂಢರಿಗೆ ಪ್ರಾರ್ಥಿಸಲು, ಆತನಿಗೆ ಶಿವಪಂಚಾಕ್ಷರಿಯನ್ನು ಸ್ವಾಮಿಯವರು ಉಪದೇಶಿಸಿದರು. ಅದರಿಂದ ಆ ಬ್ರಾಹ್ಮಣನ ರೋಗ ಪರಿಹಾರವಾಯಿತು.ಈ ಪ್ರಕಾರ ಸಿದ್ಧಾರೂಢ ಸದ್ಗುರುಗಳು ಜನರೊಳಗೆ ಉಪಕಾರ ಕೃತ್ಯಗಳನ್ನು ಮಾಡಿ, ಅವರನ್ನು ಭಕ್ತಿಪಂಥಕ್ಕೆ ಹಚ್ಚುವರು. ಜಿಜ್ಞಾಸುಗಳು ಬಂದಲ್ಲಿ ಅವರ ಶಂಕೆಗಳನ್ನು ಪರಿಹರಿಸುವರು. ಲೋಕೋದ್ಧಾರಕ್ಕಾಗಿ ಸಿದ್ದರ ಅವತಾರವಿದ್ದು, ಅದನ್ನು ಸಾರ್ಥಕ ಮಾಡುವದರ ಸಲುವಾಗಿ ಯಾತ್ರೆಯ ನಿಮಿತ್ತದಿಂದ, ಸಂಚಾರ ಮಾಡಿ ಮುಮುಕ್ಷು ಜನರನ್ನು ಉದ್ದರಿಸುವರು. ಎಂಬಲ್ಲಿ ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ ಈ ಏಳನೇ ಅಧ್ಯಾಯವನ್ನು ಶಿವದಾಸನು ಶ್ರೀ ಸಿದ್ಧಾರೂಢ ಸದ್ಗುರುಗಳ ಚರಣಾರವಿಂದಗಳಲ್ಲಿ ಅರ್ಪಿಸಿರುವನು.